**ದಿನಾಂಕ 21-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು - 1 ಮತ್ತು 6 ನೇ ಪ್ರತಿವಾದಿಯರ ಪರ ವಕೀಲರಿಂದಃ**

2018 ರಲ್ಲಿ ನಾನು ಹೊಸ ಸ್ಕೂಟರ್ ನ್ನು ಖರೀದಿಸಿದ್ದೆ ಎಂದರೆ ಸರಿ. ಅದನ್ನು ಎಷ್ಟು ಹಣ ಕೊಟ್ಟು ಖರೀದಿಸಿದ್ದೆ ಎಂದು ನೆನಪಿಲ್ಲ . ಸದ್ರಿ ಸ್ಕೂಟರ್ ನ್ನು ಕುಟುಂಬದ ಹಣದಿಂದ ಖರೀದಿಸಿದ್ದೆ. 2018 ರಲ್ಲಿ 1 ನೇ ಪ್ರತಿವಾದಿ ನನ್ನ ಅಣ್ಣ ಕುಟುಂಬದ ಹಣದಿಂದ ನನ್ನ ಹೆಸರಿನಲ್ಲಿ ಖರೀದಿಸಿರುತ್ತಾರೆ. ನನ್ನ ಅಣ್ಣ ಉಡುಪಿಯ TVS Showroom ನಿಂದ ಸದ್ರಿ ಸ್ಕೂಟರ್ ನ್ನು ಖರೀದಿಸಿರುತ್ತಾರೆ. ಸ್ಕೂಟರ್ ನ ದಾಖಲೆಯನ್ನು ನನ್ನ ಹೆಸರಿನಲ್ಲಿ ಮಾಡಿದ್ದಾರೋ ಅವರ ಹೆಸರಿನಲ್ಲಿ ಮಾಡಿದ್ದಾರೋ ನೆನಪಿಲ್ಲ. ಆ ಸ್ಕೂಟರ್ ನ್ನು ನನ್ನ ಅಣ್ಣನೇ ಮಾರಾಟ ಮಾಡಿರುತ್ತಾರೆ. ಸ್ಕೂಟರ್ ನ್ನು ಯಾವಾಗ ಮಾರಾಟ ಮಾಡಲಾಗಿದೆ ಎಂದು ನೆನಪಿಲ್ಲ. ಸ್ಕೂಟರ್ ಖರೀದಿ ಮಾಡಿದ ಎಷ್ಟು ವರ್ಷ ದ ನಂತರ ಮಾರಾಟ ಮಾಡಲಾಗಿದೆ ಎಂದು ನೆನಪಿಲ್ಲ. ಸ್ಕೂಟರ್ ನ್ನು ಎಷ್ಟು ಮೊತ್ತಕ್ಕೆ ಮಾರಾಟ ಮಾಡಲಾಗಿದೆ ಎಂದೂ ಕೂಡ ನೆನಪಿಲ್ಲ. ನನ್ನ ಹೆಸರಿನಲ್ಲಿ ಆರ್ ಸಿ ಇತ್ತು. ನಾನು ಸ್ಕೂಟರ್ ನ್ನು ಒಂದು ತಿಂಗಳ ಕಾಲ ಮಾತ್ರ ಚಲಾಯಿಸಿರುತ್ತೇನೆ. ನಂತರ ಚಲಾಯಿಸಿರುವುದಿಲ್ಲ. ಸ್ಕೂಟರ್ ಮಾರಾಟವಾಗಿದೆಯೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಚಾಣಕ್ಯ ರಸ್ತೆಯಲ್ಲಿ ನಾನು ಒಂದು ಕಚೇರಿಯನ್ನು ಮಾಡಿದ್ದೆ ಎಂದರೆ ಸರಿ. ಸದ್ರಿ ಕಚೇರಿ ಬಗ್ಗೆ ಏನೂ ಗೊತ್ತಿಲ್ಲ ನನ್ನ ಅಣ್ಣನೇ ಮಾಡಿರುತ್ತಾರೆ. ಅಲ್ಲಿ ನಾನು ಯಾವುದೇ ವ್ಯವಹಾರ ಮಾಡುತ್ತಿರಲಿಲ್ಲ. ನನ್ನ ಅಣ್ಣ ಸದ್ರಿ ಕಚೇರಿಯಲ್ಲಿ ಕುಳಿತುಕೊಳ್ಳುತಿದ್ದರು ನಾನು ಜೊತೆಯಲ್ಲಿ ಇರುತಿದ್ದೆ. ನನ್ನ ಸ್ನೇಹಿತರ ಜೊತೆ ನಾನು ಸದ್ರಿ ಕಚೇರಿಯಲ್ಲಿ ಕುಳಿತುಕೊಳ್ಳುತಿದ್ದೆ ಎಂದರೆ ಸರಿ. ನಾನು ಅಲ್ಲಿ ರಿಯಲ್ ಎಸ್ಟೇಟ್ , ಮನಿ

ಲೆಂಡಿಂಗ್ ವ್ಯವಹಾರ ಮಾಡುತಿದ್ದೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಸ್ನೇಹಿತ ಶಿವು ನ ಜೊತೆ ಬ್ಯಾಂಕಾಕ್ ಗೆ ಪ್ರವಾಸ ಹೋಗಿದ್ದೆವು ಎಂದರೆ ಸರಿ . 2012 ರಲ್ಲಿ ಹೋಗಿರಬಹುದು ನೆನಪಿಲ್ಲ . ನನ್ನ ಸ್ನೇಹಿತ ಸದ್ಗುರು ಜೊತೆ 2014 ರಲ್ಲಿ ದುಬೈಗೆ ಪ್ರವಾಸ ಹೋಗಿದ್ದೆ. ಪ್ರವಾಸಕ್ಕೆ ಎಷ್ಟು ಹಣ ಖರ್ಚಾಯಿತು ಎಂದು ನೆನಪಿಲ್ಲ. ಸದ್ರಿ ಪ್ರವಾಸಕ್ಕೆ ನಮ್ಮ ಕುಟುಂಬದ ಹಣದಲ್ಲಿ ಹೋಗಿರುತ್ತೇನೆ. ಸದ್ರಿ ಪ್ರವಾಸವನ್ನು ನನ್ನ ಅಣ್ಣ ಒಂದನೇ ಪ್ರತಿವಾದಿಯೇ ಅರೆಂಜ್ ಮಾಡಿರುತಾರೆ . ಪ್ರವಾಸಕ್ಕೆ ಟಿಕೆಟ್ ನ ಬಗ್ಗೆ ನನ್ನ ಅಣ್ಣನನ್ನೇ ಕೇಳಬೇಕಾಗುತ್ತದೆ. ವಿದೇಶ ಪ್ರವಾಸಕ್ಕೆ ನಿಮ್ಮ ಸ್ವಂತ ಹಣ ವಿನಿಯೋಗಿಸಿಲ್ಲ ಎಂದು ಹೇಳುತೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಕುಟುಬಂದ ಹಣ ಎಂದು ತಿಳಿಸಿರುತಾರೆ. ಆ ಸಮಯದಲ್ಲಿ ಕುಟುಂಬದ ಒಟ್ಟು ಖಾತೆ ಇತ್ತೋ ಇಲ್ಲವೋ ನೆನಪಿಲ್ಲ. ವಿದೇಶ ಪ್ರವಾಸದ ಬಗ್ಗೆ ನನ್ನ ಐಟಿ ರಿಟನ್ಸ್ ನಲ್ಲಿ ಕಾಣಿಸಿದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ 2020 ರವರೆಗೆ ಐಟಿ ರಿಟನ್ಸ್ ನ್ನು ನನ್ನ ಅಣ್ಣನೇ ಸಲ್ಲಿಸುತಿದ್ದ ಎಂದು ತಿಳಿಸಿರುತ್ತಾರೆ. ವಿದೇಶ ಪ್ರವಾಸದ ಬಗ್ಗೆ ನನ್ನ ಬಳಿ ದಾಖಲೆ ಇಲ್ಲ. 2020 ರವರೆಗೆ ಎಲ್ಲಾ ಹೂಡಿಕೆಗಳು ನಿಮ್ಮ ಅಣ್ಣನಾ ಹಣವಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಎಲ್ಲಾ ಕುಟುಂಬದ ಹಣ ಎಂದು ತಿಳಿಸಿರುತ್ತಾರೆ. ಮುಂದುವರಿದು ನನ್ನ ಅಣ್ಣನ ಸ್ವಂತ ಹಣ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಎಲ್ಲಾ ಹೂಡಿಕೆಗಳು 2020 ರವರೆಗೆ ನನ್ನ ಸ್ವಂತ ಹಣದ ಹೂಡಿಕೆ ಯಲ್ಲ ಅದು ಒಟ್ಟು ಕುಟುಂಬದ ಹಣದ ಹೂಡಿಕೆ . ಒಟ್ಟು ಕುಟುಂಬದ ಹಣ ಹೂಡಿಕೆ ಮಾಡಿದ ಬಗ್ಗೆ ನನ್ನ ಹೇಳಿಕೆ ಬಿಟ್ಟು ದಾಖಲೆ ನನ್ನ ಬಳಿ ಇಲ್ಲ . ಹಣ ಹೂಡಿಕೆ ಮಾಡಿದ ದಾಖಲೆಯೇ ಒಟ್ಟು ಕುಟುಂಬದ ಹಣ ಹೂಡಿಕೆ ಮಾಡಿದ ಬಗ್ಗೆ ದಾಖಲೆ ಆಗಿರುತ್ತದೆ.

ನನಗೆ ಮಲ್ಪೆಯ ಸುರೇಶ್ ಎನ್ನುವ 12 ಜನ ವ್ಯಕ್ತಿಗಳ ಪರಿಚಯ ಇದೆ . ಯಾವ ಸುರೇಶ್ ಎಂದು ಗೊತ್ತಿಲ್ಲ. ನಾನು ಮಲ್ಪೆಯ ಸುರೇಶ್ ಎನ್ನುವರ ಜೊತೆ ನಾನು ಯಾವುದೇ ವ್ಯವಹಾರ ಮಾಡಿಲ್ಲ. ಸುರೇಶ್ ಎಂಬ ವ್ಯಕ್ತಿಯ ಜೊತೆ ನನ್ನದು ಯಾವುದೇ ವ್ಯವಹಾರ ಇರಲಿಲ್ಲ

. ಸುರೇಶ್ ಎನ್ನುವ ವ್ಯಕ್ತಿಯ ಜೊತೆ ವ್ಯವಹಾರ ಇತ್ತೊ ಇಲ್ಲವೋ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಬಹಳಷ್ಟು ಸುರೇಶ್ ಇದ್ದಾರೆ ಯಾವ ಸುರೇಶ್ ಹೇಳಿ ಎಂದು ಸಾಕ್ಷಿ ತಿಳಿಸಿರುತ್ತಾರೆ. ಆ್ಯಕ್ಸಿಸ್ ಬ್ಯಾಂಕ್ ನ ಸ್ಟೇಟ್‌ಮೆಂಟ್ ನ್ನು ನಾನು ಬೇಕಾದರೇ ಹಾಜರುಪಡಿಸುತ್ತೇನೆ . ನನಗೆ ಗೊತ್ತಿರುವ ಹಾಗೇ 19,87,499/- ಎಲ್ ಐ ಸಿ ಹಣ ಬಂದಿದ್ದು ಬಿಟ್ಟರೇ ಎಲ್ ಐ ಸಿ ಯಿಂದ ಬೇರೆ ಯಾವುದೇ ಹಣ ನನಗೆ ಗೊತ್ತಿರುವ ಹಾಗೇ ಬಂದಿಲ್ಲ. 20-02-2020 ರಂದು 21659/- ಮತ್ತು 27436/- ಹಣ ಎಲ್ ಐಸಿ ಯಿಂದ ನನ್ನ ಖಾತೆಗೆ ಜಮೆ ಆಗಿದೆ ಎಂದರೆ ನನಗೆ ತಿಳಿದಿಲ್ಲ . ನನ್ನ ಆ್ಯಕ್ಸಿಸ್ ಬ್ಯಾಂಕ್ ನ ಖಾತೆಯಲ್ಲಿ ಈ ಬಗ್ಗೆ ಕಂಡುಬರುತ್ತದೆ ಎಂದರೆ ನೆನಪಿಲ್ಲ. 29-02-2020 ರಂದು ನನ್ನ ಖಾತೆಗೆ ರೂ 49,949/- ಹಣ ಎಲ್‌ಐಸಿ ಯಿಂದ ಜಮೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಅದೂ ಕೂಡ ನನ್ನ ಆ್ಯಕ್ಸಿಸ್ ಬ್ಯಾಂಕ್ ಖಾತೆಯಲ್ಲಿ ಕಂಡುಬರುತ್ತದೆ ಎಂದರೆ ನನಗೆ ಗೊತ್ತಿಲ್ಲ . 29-02-2020 ರಂದು ವಿವಿ ಲಕ್ಷ್ಮೀ ನಾರಾಯಣ ರವರ ಖಾತೆಯಿಂದ 12 ಲಕ್ಷ ನನ್ನ ಖಾತೆಗೆ ಜಮೆ ಆಗಿದೆ ಎಂದರೆ ನನಗೆ ತಿಳಿದಿಲ್ಲ . 29-06-2020 ರಂದು ಸುರೇಶ್ ಎನ್ನುವವರಿಂದ ನನ್ನ ಖಾತೆಗೆ ರೂ 10 ಲಕ್ಷ ಜಮೆ ಆಗಿದೆ ಎಂದರೆ ನೆನಪಿಲ್ಲ , ನೋಡಿ ಹೇಳಬೇಕು ಎಂದು ಸಾಕ್ಷಿ ತಿಳಿಸಿರುತಾರೆ. 30-07-2020 ರಂದು ಕಮಲಾಕ್ಷಿ ಗೃಹ ನಿರ್ಮಾಣ ಸಹಕಾರ ಸಂಘದಿಂದ ರೂ 10,05759/- ನನ್ನ ಖಾತೆಗೆ ಹಣ ಜಮೆ ಆಗಿದೆ ಎಂದರೆ ನೆನಪಿಲ್ಲ . ಎಕ್ಸೈಡ್ ಲೈಫ್ ಇನ್ಸುರೆನ್ಸ್ ನಲ್ಲಿ ಪಾಲಿಸಿ ಇತ್ತೋ ಇಲ್ಲವೋ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನೆನಪಿಲ್ಲ ಎಂದು ತಿಳಿಸಿರುತ್ತಾರೆ. 29-07-2020 ರಂದು ಎಕ್ಸೈಡ್ ಲೈಫ್ ಇನ್ಸುರೆನ್ಸ್ ನಿಂದ ನನ್ನ ಖಾತೆಗೆ 6,96,132/- ಹಣ ಜಮೆ ಆಗಿದೆ ಎಂದರೆ ನೆನಪಿಲ್ಲ. Empire Seafood ನ ಜೊತೆ ನನಗೆ ವ್ಯವಹಾರ ಇತ್ತೋ ಇಲ್ಲವೋ ನೆನಪಿಲ್ಲ. 04-12-2020 ರಂದು Empire Seafood ನಿಂದ ನನ್ನ ಖಾತೆಗೆ 10 ಲಕ್ಷ ಜಮೆ ಆಗಿದೆ ಎಂದರೆ ನೆನಪಿಲ್ಲ. 2020 ರ ನಂತರ ನಾನೇ ಬ್ಯಾಂಕ್ ನ ನನ್ನ ಖಾತೆಯನ್ನು ನಿರ್ವಹಿಸುತಿದ್ದೆ . ಆ್ಯಕ್ಸಿಸ್ ಬ್ಯಾಂಕ್ ನ ಖಾತೆಯನ್ನು 2020 ರ ನಂತರ ನಾನೇ ನಿರ್ವಹಿಸುತಿದ್ದೆ . ನಾನು ಪಾಸ್ ಪುಸ್ತಕದ ಎಂಟ್ರಿಯನ್ನು ನೋಡುವುದಿಲ್ಲ ಬೇಕಾದರೇ ಮಾತ್ರ ನೋಡುತ್ತೇನೆ. ನಮ್ಮ ಹುಡುಗರು ಪಾಸ್ ಪುಸ್ತಕರ ಎಂಟ್ರಿ ಮಾಡಿಕೊಂಡು ಬರುತಾರೆ. Empire Seafood ನಿಂದ 03-02-2021 ರಂದು 20 ಲಕ್ಷ ನನ್ನ ಖಾತೆಗೆ ಜಮೆ ಆಗಿದೆ ಎಂದರೆ ನನಗೆ ನೆನಪಿಲ್ಲ . ಕೊನೆಯಾದಾಗಿ ಆ್ಯಕ್ಸಿಸ್ ಬ್ಯಾಂಕ್ ನ ಖಾತೆಯನ್ನು ಯಾವಾಗ ನೋಡಿದಿರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನಾನು ನೋಡಿಯೇ ಇಲ್ಲ ಎಂದು ತಿಳಿಸಿರುತಾರೆ. Canara Industrial Co operative Society ಯಲ್ಲಿ ಠೇವಣಿ ಅಥವಾ ವ್ಯವಹಾರ ಮಾಡಿದೀರಾ

ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನಾನು ಮಾಡಿಲ್ಲ ನನ್ನ ಅಣ್ಣ ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ . 2020 ರವರೆಗೆ ನನ್ನ ಅಣ್ಣ ಠೇವಣಿ ಮತ್ತು ವ್ಯವಹಾರ ಮಾಡಿರುತ್ತಾರೆ . Canara Industrial Co operative Society ನಲ್ಲಿ ಇಟ್ಟಿದ್ದ ಠೇವಣಿ ಹಣ ಮೇಚುರ್ ಅಗಿದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಹಣ ಇಟ್ಟ ಬಗ್ಗೆಯೇ ನನಗೆ ಗೊತ್ತಿಲ್ಲ. ದಿ 15-02-2021 ರಂದು Canara Industrial Co operative Society ನಿಂದ ನನ್ನ ಖಾತೆಗೆ 10 ಲಕ್ಷ ಜಮೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ. 24-08-2025 ರಂದು ನನ್ನ ಖಾತೆಗೆ Canara Industrial Co operative Society ನಿಂದ 1,27,228/- ಜಮೆ ಆಗಿದೆ ಎಂದರೆ ಆಗಿರಬಹುದು ನೋಡಿಲ್ಲ. 23-08-2021 ರಂದು Canara Industrial Co operative Society ನಿಂದ ರೂ 100000 ನನ್ನ ಖಾತೆಗೆ ಜಮೆ ಆಗಿದೆ ಎಂದರೆ ನೆನಪಿಲ್ಲ . 2020 ರ ನಂತರ ಹೂಡಿಕೆ ಮಾಡಿರುವ ಹಣ ನನ್ನ ಸ್ವಂತ ಹಣ ಅದರ ಮೊದಲು ಇದ್ದ ಹಣ ಒಟ್ಟು ಕುಟುಂಬದ ಹಣ . 2020 ರ ನಂತರ ನಿಮ್ಮ ಬಳಿ ಇರುವ ಹಣ ಮತ್ತು ಹೂಡಿಕೆ ಮಾಡಿರುವ ಹಣದ ಮೂಲ ಯಾವುದು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಸ್ವಲ್ಪ ಜನರಿಂದ ಸಾಲ ಪಡೆದಿರುತ್ತೇನೆ ಸ್ವಲ್ಪ ಜನರಿಗೆ ಹಣ ಕೊಟ್ಟಿರುತ್ತೇನೆ ಎಂದು ತಿಳಿಸಿರುತಾರೆ . ಲಕ್ಷ್ಮೀ ನಾರಾಯಣ ಮತ್ತು ಕಮಲಾಕ್ಷಿ ಗೃಹ ನಿರ್ಮಾಣ ಸಹಕಾರ ಸಂಘದಿಂದ ನಿಮ್ಮ ಖಾತೆಗೆ ಏಕೆ ಹಣ ಜಮೆ ಆಯಿತು ಎಂದು ಈಗ ನನಗೆ ನೆನಪಿಲ್ಲ. ನನ್ನ ಬ್ಯಾಂಕ್ ಖಾತೆಯ ಸ್ಟೇಟ್‌ಮೆಂಟ್ ಹಾಜರುಪಡಿಸಲು ನನಗೆ 5 ದಿನ ಸಮಯ ಬೇಕಾಗುತ್ತದೆ . ಸಾಕ್ಷಿ ಮುಂದುವರಿದು ಯಾವ ಇಸವಿಯಿಂದ ಯಾವ ಇಸವಿಯವರೆಗೆ ಹೇಳಿದರೇ ಆಗ ಹಾಜರುಪಡಿಸುವುದಾಗಿ ತಿಳಿಸಿರುತ್ತಾರೆ. 2011 ರಿಂದ ಇಲ್ಲಿವರೆಗಿನ ಬ್ಯಾಂಕ್ ಖಾತೆಯ ಸ್ಟೇಟ್‌ಮೆಂಟ್ ಹಾಜರುಪಡಿಸಲು ತೊಂದರೆ ಇದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಬ್ಯಾಂಕ್ ನವರು ಕೊಟ್ಟರೇ ಹಾಜರುಪಡಿಸುತ್ತೇನೆ . ಬ್ಯಾಂಕ್ ಖಾತೆಯ ಸ್ಟೇಟ್‌ಮೆಂಟ್ ಕೊಡಿ ಎಂದು ಬ್ಯಾಂಕ್ ಗೆ ನಾನು ಅರ್ಜಿಯನ್ನು ಕೊಟ್ಟಿಲ್ಲ . ಆ್ಯಕ್ಸಿಸ್ ಬ್ಯಾಂಕ್ ನ ಪಾಸ್ ಬುಕ್ ನಮ್ಮ ಮನೆಯಲ್ಲಿ ಇರುತ್ತದೆ . ಆದರೇ ಅದು ಹಳೆಯ ಪಾಸ್ ಬುಕ್ ಇರುವುದಿಲ್ಲ ಎಲ್ಲಿಂದ ಇದೆ ಎಂದು ನೋಡಿ ಹೇಳಬೇಕಾಗುತ್ತದೆ. ನನ್ನ ಬಳಿ ಇರುವ ಪಾಸ್ ಪುಸ್ತಕವನ್ನು ನ್ಯಾಯಲಯಕ್ಕೆ ಹಾಜರುಪಡಿಸುತ್ತೇನೆ. ಕೆನರಾ ಬ್ಯಾಂಕ್ , ಕುಂಜಿಬೆಟ್ಟು ಶಾಖೆಯಲ್ಲಿ ಕೂಡ ನನ್ನ ಖಾತೆ ಇರುತ್ತದೆ. ಇತ್ತೀಚಿಗಿನ ಪಾಸ್‌ಪುಸ್ತಕ ಇರುತ್ತದೆ ಬೇಕಾದಲ್ಲಿ ಹಾಜರುಪಡಿಸುತ್ತೇನೆ.

**ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಒ.ಎಸ್.  - 34/2020

ಪಿ.ಡಬ್ಲ್ಯು - 01

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ ಉಡುಪಿ.